**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\2432\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10/07/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಗದಗ ಜಿಲ್ಲೆ ರೋಣ ತಾಲ್ಲೂಕ್ ಗಜೇಂದ್ರಗಢ ವಿಶೇಷ ತಹಶೀಲ್ದಾರ್‌ಗಳಾಗಿದ್ದ 1) ಶ್ರೀ.ಎಸ್.ಆರ್.ಶಿರಕೋಳ (ಪ್ರಸ್ತುತ ನಿವೃತ್ತ), 2) ಶ್ರೀ.ಬಿ.ಟಿ.ಕುಮಾರಸ್ವಾಮಿ (ಪ್ರಸ್ತುತ ದಾವಣಗೆರೆ ಸಹಾಯಕ ಆಯುಕ್ತರು), 3) ಶ್ರೀ.ವಿ.ಹೆಚ್.ಬಿರಾದರ (ಪ್ರಸ್ತುತ ಸಿಂಧಗಿ ತಹಶೀಲ್ದಾರ್), 4) ಶ್ರೀ.ಎ.ಎಂ.ಗಿರಿನಿವಾಸ (ಪ್ರಸ್ತುತ ಬಿಜಾಪುರ ತಾಲ್ಲೂಕ್ ಬಬಲೇಶ್ವರ ಉಪ ತಹಶೀಲ್ದಾರ್), ರಾಜಸ್ವ ನಿರೀಕ್ಷಕರುಗಳಾಗಿದ್ದ 5)ಶ್ರೀ.ಆರ್.ಎ.ಕುನ್ನಿ ಬಾವಿ (ಪ್ರಸ್ತುತ ಜಿಲ್ಲಾ ಪಂಚಾಯತ್), 6) ಶ್ರೀ.ಎಸ್.ಎಸ್.ಬೊಮ್ಮಣ್ಣನವರ (ಪ್ರಸ್ತುತ ಬಾದಾಮಿ ತಾಲ್ಲೂಕ್ ಕೆರೂರು ಉಪ ತಹಶೀಲ್ದಾರ್), 7) ಶ್ರೀ.ಆರ್.ಎಂ.ಭೋಮಕರ (ಪ್ರಸ್ತುತ ಗದಗ-ಬೆಟಗರಿಯ ಹೊಳೆಆಲೂರು ಉಪ ತಹಶೀಲ್ದಾರ್), ಗ್ರಾಮ ಲೆಕ್ಕಾಧಿಕಾರಿಗಳಾಗಿದ್ದ 8) ಶ್ರೀ.ಪಿ.ಎಸ್.ಪೂಜಾರ (ಪ್ರಸ್ತುತ ಧಾರವಾಡ ತಾಲ್ಲೂಕ್ ಶಿರಸ್ತೇದಾರ್) 9) ಶ್ರೀ.ಪಿ.ಬಿ.ಮಾಳಿಪಾಟೀಲ್ (ಪ್ರಸ್ತುತ ರೋಣ ತಾಲ್ಲೂಕ್ ನಿಡಗುಂಡಿ ಗ್ರಾಮ), 10) ಶ್ರೀ.ಎಸ್.ಎಸ್.ಕಡಗದ (ಪ್ರಸ್ತುತ ರೋಣ ತಾಲ್ಲೂಕ್ ನರೇಗಲ್), 11) ಶ್ರೀ.ಎಸ್.ಎನ್.ನಧಾಫ್ (ಪ್ರಸ್ತುತ ಗಜೇಂದ್ರಗಢ ವಿಶೇಷ ತಹಶೀಲ್ದಾರ್) ಮತ್ತು 12) ಶ್ರೀ.ವಿ.ವಿ.ಶಿರೂರು (ಪ್ರಸ್ತುತ ಶಿರಹಟ್ಟಿ ತಾಲ್ಲೂಕ್ ಕಛೇರಿ) ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಗದಗ ಜಿಲ್ಲೆ ಮಸಾರಿ ಗ್ರಾಮ ಕರಿಯಮ್ಮನಕಲ್ಲು ಬಡಾವಣೆಯ ನಿವಾಸಿಯಾದ ಶ್ರೀ.ಶಿದ್ದರಾಮಪ್ಪ ಶಿವಪ್ಪ ವೆಂಕಟಾಪುರ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರು ಅರ್ಜಿಯಲ್ಲಿ ಗದಗ ಜಿಲ್ಲೆ ರೋಣ ತಾಲ್ಲೂಕಿನ ಗಜೇಂಧ್ರಗಡ ವಿಶೇಷ ತಹಶೀಲ್ದಾರ್‌ರವರ ಕಛೇರಿಯಲ್ಲಿ ಸದರಿ ಹೋಬಳಿಗೆ ಸಂಬಂಧಪಟ್ಟ ಎಲ್ಲಾ ಗ್ರಾಮಗಳಲ್ಲಿ 2002 ರಿಂದ ಜೂನ್, 2013ರವರೆಗೆ ಸರ್ಕಾರದ ಯೋಜನೆಗಳಾದ ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ, ವಿಧವಾ ವೇತನ ಹಾಗೂ ಅಂಗವಿಕಲರ ವೇತನಗಳನ್ನು ಕಾನೂನುಬಾಹಿರವಾಗಿ ಮಂಜೂರು ಮಾಡಿ, ಸರ್ಕಾರಕ್ಕೆ ತುಂಬಲಾರದ ಆರ್ಥಿಕ ನಷ್ಟ ಉಂಟು ಮಾಡಿರುವುದಾಗಿ ಹೇಳಿದ್ದಾರೆ.

N. Anand

2. ಸದರಿ ದೂರು ಅರ್ಜಿಯಲ್ಲಿನ ವಿಷಯದ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಗದಗ ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ಅಧೀಕ್ಷಕರಿಗೆ ಆದೇಶಿಸಲಾಗಿ, ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ತಮ್ಮ ವರದಿಯಲ್ಲಿ –

1) ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 2002 ರಿಂದ 2013ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಆಸ್ತಿ ಇದ್ದರೂ ಮತ್ತು ವಯೋಮಿತಿ ಕಡಿಮೆಯಿದ್ದರೂ ಕಾನೂನುಬಾಹಿರವಾಗಿ ವೇತನ ಮಂಜೂರು ಮಾಡಿದ್ದಾರೆ. 2012ನೇ ಸಾಲಿನಲ್ಲಿ 2 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಸದರಿ ಫಲಾನುಭವಿಗಳು ಮಾಡುತ್ತಿರುವ ಉದ್ಯೋಗ ಮತ್ತು ಜಮೀನುಗಳಿದ್ದ ಬಗ್ಗೆ ಮಾಹಿತಿ ಪಡೆಯದೇ ಮಂಜೂರು ಮಾಡಿದ್ದಾರೆ;

2) ವೃದ್ಧಾಪ್ಯ ವೇತನ 2002 ರಿಂದ 2013ರ ಅವಧಿಯಲ್ಲಿ ಕಾನೂನು ಅಂಶಗಳನ್ನು ಉಲ್ಲಂಘಿಸಿ ಮಂಜೂರು ಮಾಡಿದ್ದು, 2006ರಲ್ಲಿ 52 ಫಲಾನುಭವಿಗಳು, 2007ರಲ್ಲಿ 620 ಫಲಾನುಭವಿಗಳು, 2008ರಲ್ಲಿ 1053 ಫಲಾನುಭವಿಗಳು, 2009ರಲ್ಲಿ 461 ಫಲಾನುಭವಿಗಳು, 2010ರಲ್ಲಿ 275 ಫಲಾನುಭವಿಗಳು, 2012ರಲ್ಲಿ 7 ಫಲಾನುಭವಿಗಳು, 2013ರಲ್ಲಿ 18 ಫಲಾನುಭವಿಗಳನ್ನು, ಒಟ್ಟು 2586 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಆ ಸಂದರ್ಭದಲ್ಲಿ ಫಲಾನುಭವಿಗಳ ಪಡಿತರ ಚೀಟಿ, ಚುನಾವಣಾ ಚೀಟಿ, ವಯಸ್ಸಿನ ಪ್ರಮಾಣ ಪತ್ರ, ಜಮೀನು ಹೊಂದಿರುವ ಬಗ್ಗೆ ಮಾಹಿತಿ, ಕಂದಾಯ ನಿರೀಕ್ಷಕರ ಶಿಫಾರಸ್ಸು ಪತ್ರಗಳಿಲ್ಲದೆ ಮಂಜೂರು ಮಾಡಲಾಗಿದೆ;

3) ವಿಧವಾ ವೇತನವನ್ನು 2002ರಲ್ಲಿ 25 ಫಲಾನುಭವಿಗಳಿಗೆ, 2003ರಲ್ಲಿ 12 ಫಲಾನುಭವಿಗಳಿಗೆ, 2004ರಲ್ಲಿ 24 ಫಲಾನುಭವಿಗಳಿಗೆ, 2005ರಲ್ಲಿ 8 ಫಲಾನುಭವಿಗಳಿಗೆ, 2006ರಲ್ಲಿ 39 ಫಲಾನುಭವಿಗಳಿಗೆ, 2007ರಲ್ಲಿ 122 ಫಲಾನುಭವಿಗಳಿಗೆ, 2008ರಲ್ಲಿ 164 ಫಲಾನುಭವಿಗಳಿಗೆ, 2009ರಲ್ಲಿ 45 ಫಲಾನುಭವಿಗಳಿಗೆ, 2010ರಲ್ಲಿ 69 ಫಲಾನುಭವಿಗಳಿಗೆ, 2012ರಲ್ಲಿ 61 ಫಲಾನುಭವಿಗಳಿಗೆ, 2013ರಲ್ಲಿ 31 ಫಲಾನುಭವಿಗಳಿಗೆ, ಒಟ್ಟು 600 ಫಲಾನುಭವಿಗಳಿಗೆ ಮಂಜೂರು ಮಾಡಿದ್ದು, ಆ ಸಂದರ್ಭದಲ್ಲಿ ಫಲಾನುಭವಿಗಳ ಪಡಿತರ ಚೀಟಿ, ಚುನಾವಣಾ ಚೀಟಿ, ವಯಸ್ಸಿನ ಪ್ರಮಾಣ ಪತ್ರ, ಜಮೀನಿನ ಬಗ್ಗೆ ಮಾಹಿತಿ, ಗ್ರಾಮ ಲೆಕ್ಕಿಗರ ಮತ್ತು ಕಂದಾಯ ನಿರೀಕ್ಷಕರ ಶಿಫಾರಸ್ಸು ಪಡೆಯದೆ ಮಂಜೂರು ಮಾಡಿದ್ದಾರೆ;

4) ಅಂಗವಿಕಲ ವೇತನವನ್ನು 2007–08ರಲ್ಲಿ 6 ಫಲಾನುಭವಿಗಳಿಗೆ, 2008–09ರಲ್ಲಿ 65 ಫಲಾನುಭವಿಗಳಿಗೆ, 2009–10ರಲ್ಲಿ 122 ಫಲಾನುಭವಿಗಳಿಗೆ, 2010–11ರಲ್ಲಿ 34 ಫಲಾನುಭವಿಗಳಿಗೆ, ಒಟ್ಟು 227 ಫಲಾನುಭವಿಗಳಿಗೆ ಮಂಜೂರು ಮಾಡಿದ್ದು, ಆ ಸಂದರ್ಭದಲ್ಲಿ ಪಡಿತರ ಚೀಟಿ, ಚುನಾವಣಾ ಚೀಟಿ, ವಯಸ್ಸಿನ ಪ್ರಮಾಣ ಪತ್ರ, ವೈದ್ಯಕೀಯ ಪ್ರಮಾಣ ಪತ್ರ, ಜಮೀನಿನ ಬಗ್ಗೆ ಮಾಹಿತಿ, ಗ್ರಾಮ ಲೆಕ್ಕಿಗರ ಮತ್ತು ಕಂದಾಯ ನಿರೀಕ್ಷಕರ ಶಿಫಾರಸ್ಸು ಪಡೆಯದೆ ಮಂಜೂರು ಮಾಡಿದ್ದಾರೆ. ಈ ಬಗ್ಗೆ ವೈದ್ಯಾಧಿಕಾರಿಗಳು ನೀಡಿದ ಬಗ್ಗೆ ವೈದ್ಯರಿಂದ ಮಾಹಿತಿ

N. Ananda

BSM/2432/16



ಪಡೆಯಲಾಗಿ, ಜಿಲ್ಲಾ ಶಸ್ತ್ರಚಿಕಿತ್ಸಕ, ಗದಗ ರವರು 170 ಫಲಾನುಭವಿಗಳ ವೈದ್ಯಕೀಯ ಪ್ರಮಾಣ ಪತ್ರದ ಪ್ರತಿಗಳಲ್ಲಿ 81 ಪ್ರಮಾಣ ಪತ್ರಗಳು ಗದಗದಿಂದ ನೀಡಿದ್ದು, ಇನ್ನುಳಿದ 87 ಫಲಾನುಭವಿಗಳಿಗೆ ನೀಡಿದ ಪ್ರಮಾಣ ಪತ್ರಗಳು ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿಲ್ಲವೆಂದು ಹೇಳಿದ್ದಾರೆ. ಉಳಿದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ ಮತ್ತು ಅಂಗವಿಕಲ ವೇತನಕ್ಕೆ ಸಂಬಂಧಪಟ್ಟಂತೆ ತಹಶೀಲ್ದಾರ್‌ರವರನ್ನು ಕೇಳಲಾಗಿ, ಯಾವುದೇ ಮಾಹಿತಿ ಇಲ್ಲವೆಂದು ಹೇಳಿ, ಸದರಿ ಕರ್ತವ್ಯ ಲೋಪಕ್ಕೆ ಜವಾಬ್ದಾರರಾದ ಸದರಿ ಕಾರ್ಯಾವಧಿಯಲ್ಲಿ ಕಾರ್ಯನಿರ್ವಹಿಸಿದ 16 ಜನ ವಿಶೇಷ ತಹಶೀಲ್ದಾರ್, 6 ಕಂದಾಯ ನಿರೀಕ್ಷಕರು ಮತ್ತು 6 ಗ್ರಾಮ ಲೆಕ್ಕಾಧಿಕಾರಿಗಳು ಜವಾಬ್ದಾರರಾಗಿರುತ್ತಾರೆಂದು ಹೇಳಿದ್ದಾರೆ.

3. ಸದರಿ ಕರ್ತವ್ಯ ಲೋಪಕ್ಕೆ ಜವಾಬ್ದಾರರಾದ, ಸದರಿ ಕಾರ್ಯಾವಧಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ/ ನೌಕರರುಗಳ ಸೇವಾ ವಿವರಗಳನ್ನು ಪಡೆದು, ಕೆಲವು ಅಧಿಕಾರಿ/ ನೌಕರರು ಮೃತಪಟ್ಟಿದ್ದು ಹಾಗೂ ಕೆಲವರು ವಯೋ ನಿವೃತ್ತಿ ಹೊಂದಿ 4 ವರ್ಷಗಳು ಮೇಲ್ಪಟ್ಟದ್ದರಿಂದ, ಸದರಿಯವರುಗಳ ವಿರುದ್ಧದ ನಡವಳಿಗಳನ್ನು ಕೈಬಿಟ್ಟು, ಉಳಿದ 14 ಅಧಿಕಾರಿ/ ನೌಕರರುಗಳಾದ ಗದಗ ಜಿಲ್ಲೆ ರೋಣ ತಾಲ್ಲೂಕ್ ಗಜೇಂದ್ರಗಢ ವಿಶೇಷ ತಹಶೀಲ್ದಾರ್‌ಗಳಾಗಿದ್ದ 1) ಶ್ರೀ.ಎಸ್.ಆರ್.ಶಿರಕೋಳ (ಪ್ರಸ್ತುತ ನಿವೃತ್ತ), 2) ಶ್ರೀ.ಜಿ.ವಿ.ಶೇಷಗಿರಿ (ಪ್ರಸ್ತುತ ನಿವೃತ್ತ), 3)ಶ್ರೀ.ಬಿ.ಟಿ.ಕುಮಾರಸ್ವಾಮಿ (ಪ್ರಸ್ತುತ ದಾವಣಗೆರೆ ಸಹಾಯಕ ಆಯುಕ್ತರು), 4) ಶ್ರೀ.ವಿ.ಹೆಚ್.ಬಿರಾದರ (ಪ್ರಸ್ತುತ ಸಿಂಧಗಿ ತಹಶೀಲ್ದಾರ್), 5) ಶ್ರೀ.ಎ.ಎಂ.ಗಿರಿನಿವಾಸ (ಪ್ರಸ್ತುತ ಬಿಜಾಪುರ ತಾಲ್ಲೂಕ್ ಬಬಲೇಶ್ವರ ಉಪ ತಹಶೀಲ್ದಾರ್), 6) ಶ್ರೀ.ವೈ.ಎಂ.ದುಂಡಿಗೇರಿ (ಪ್ರಸ್ತುತ ನಿವೃತ್ತ), ರಾಜಸ್ವ ನಿರೀಕ್ಷಕರುಗಳಾಗಿದ್ದ 7)ಶ್ರೀ.ಆರ್.ಎ.ಕುನ್ನಿಬಾವಿ (ಪ್ರಸ್ತುತ ಜಿಲ್ಲಾ ಪಂಚಾಯತ್), 8) ಶ್ರೀ.ಎಸ್.ಎಸ್.ಬೊಮ್ಮಣ್ಣನವರ (ಪ್ರಸ್ತುತ ಬಾದಾಮಿ ತಾಲ್ಲೂಕ್ ಕೆರೂರು ಉಪ ತಹಶೀಲ್ದಾರ್), 9) ಶ್ರೀ.ಆರ್.ಎಂ.ಭೋಮಕರ (ಪ್ರಸ್ತುತ ಗದಗ–ಬೆಟಗೆರಿಯ ಹೊಳೆಆಲೂರು ಉಪ ತಹಶೀಲ್ದಾರ್), ಗ್ರಾಮ ಲೆಕ್ಕಾಧಿಕಾರಿಗಳಾಗಿದ್ದ 10) ಶ್ರೀ.ಪಿ.ಎಸ್.ಪೂಜಾರ (ಪ್ರಸ್ತುತ ಧಾರವಾಡ ತಾಲ್ಲೂಕ್ ಶಿರಸ್ತೇದಾರ್), 11) ಶ್ರೀ.ಪಿ.ಬಿ.ಮಾಳಿಪಾಟೀಲ್ (ಪ್ರಸ್ತುತ ರೋಣ ತಾಲ್ಲೂಕ್ ನಿಡಗುಂದಿ ಗ್ರಾಮ), 12)ಶ್ರೀ.ಎಸ್.ಎಸ್.ಕಡಗದ (ಪ್ರಸ್ತುತ ರೋಣ ತಾಲ್ಲೂಕ್ ನರೇಗಲ್), 13) ಶ್ರೀ.ಎಸ್.ಎನ್.ನಧಾಫ್ (ಪ್ರಸ್ತುತ ಗಜೇಂದ್ರಗಢ ವಿಶೇಷ ತಹಶೀಲ್ದಾರ್) ಮತ್ತು 14) ಶ್ರೀ.ವಿ.ವಿ.ಶಿರೂರು (ಪ್ರಸ್ತುತ ಶಿರಹಟ್ಟಿ ತಾಲ್ಲೂಕ್ ಕಛೇರಿ) [ಇನ್ನು ಮುಂದೆ "1 ರಿಂದ 14ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ

N. Dhanuka

ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 7(2)ರಡಿ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡು, ಮುಖಪುಟದಲ್ಲಿ ಸೇರಿಸಿ, ಸದರಿ 14 ಎದುರುದಾರರುಗಳಿಂದ ತನಿಖಾ ವರದಿಗೆ ಆಕ್ಷೇಪಣೆಯನ್ನು ಕೇಳಲಾಯಿತು.

4. ಒಂದು (1) ಮತ್ತು 14ನೇ ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

5. ಎರಡು (2), 8 ಮತ್ತು 9ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:30/12/2004 ರಿಂದ 30/05/2005ರವರೆಗೆ ಪ್ರಭಾರಿ ವಿಶೇಷ ತಹಶೀಲ್ದಾರಾಗಿ ಕಾರ್ಯನಿರ್ವಹಿಸಿದ್ದು, ಸಾಮಾಜಿಕ ಭದ್ರತಾ ಯೋಜನೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಕಾನೂನು ರೀತಿ ನಿರ್ವಹಣೆ ಮಾಡಿದ್ದು, ಇದರಲ್ಲಿ ತಮ್ಮದು ಯಾವುದೇ ಕರ್ತವ್ಯ ಲೋಪ ಇಲ್ಲವೆಂದು ಹೇಳಿದ್ದಾರೆ.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು 2007 ರಿಂದ 2008 ರವರೆಗೆ ಗಜೇಂದ್ರಗಢದಲ್ಲಿ ವಿಶೇಷ ತಹಶೀಲ್ದಾರಾಗಿ ಕರ್ತವ್ಯ ನಿರ್ವಹಿಸಿದ್ದು, ಸಂಧ್ಯಾ ಸುರಕ್ಷಾ ಯೋಜನೆಗೆ ಸಂಬಂಧಪಟ್ಟ ವೇತನವನ್ನು ಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರು ನೀಡಿದ ವರದಿಯ ಆಧಾರದ ಮೇಲೆ ಮಂಜೂರು ಮಾಡಿದೆ ಹಾಗೂ ವೃದ್ಧಾಪ್ಯ ವೇತನ, ಅಂಗವಿಕಲ ವೇತನಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಆದೇಶ ಸಂ:ಕಂಅ 5 ಡಿಎಸ್‌ಪಿ 2012 ದಿ:11/01/12 ಮತ್ತು ಕಂಅ 39 ಡಿಎಸ್‌ಪಿ 2012 ದಿ:06/08/12ರಂತೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಿದೆಯೆಂದು ಹೇಳಿದ್ದಾರೆ.

7. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:27/11/2009 ರಂದು ಗಜೇಂದ್ರಗಢದಲ್ಲಿ ವಿಶೇಷ ತಹಶೀಲ್ದಾರಾಗಿ ಕರ್ತವ್ಯ ನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಸದರಿ ಯೋಜನೆಗಳಿಗೆ ಸಂಬಂಧಪಟ್ಟ ಫಲಾನುಭವಿಗಳ ಪಡಿತರ ಚೀಟಿ, ಚುನಾವಣಾ ಚೀಟಿ, ವಯಸ್ಸಿನ ಪ್ರಮಾಣ ಪತ್ರ, ವೈಧ್ಯರು ನೀಡಿದ ಅಂಗವೈಕಲ್ಯದ ಶೇಕಡ ಪ್ರಮಾಣ ಪತ್ರ ರಾಜಸ್ವ ನಿರೀಕ್ಷಕರು ನೀಡಿದ ವರದಿಯ ಮೇಲೆ ಮಂಜೂರು ಮಾಡಿದೆಯೆಂದು ಹೇಳಿದ್ದಾರೆ.

N. Ananda

BhM/2432/16



8. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:28/08/2011 ರಿಂದ 15/11/2011ರವರೆಗೆ ಗಜೇಂದ್ರಗಢದಲ್ಲಿ ವಿಶೇಷ ತಹಶೀಲ್ದಾರಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಯೋಜನೆಗೆ ಸಂಬಂಧಪಟ್ಟ ಸರ್ಕಾರದ ಮಾರ್ಗಸೂಚಿಗಳನ್ವಯ ಕೆಲಸ ನಿರ್ವಹಿಸಿದೆಯೆಂದು ಹೇಳಿದ್ದಾರೆ.

9. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:20/11/2011 ರಿಂದ 04/08/2012ರವರೆಗೆ ಗಜೇಂದ್ರಗಢದಲ್ಲಿ ವಿಶೇಷ ತಹಶೀಲ್ದಾರಾಗಿ ಕರ್ತವ್ಯ ನಿರ್ವಹಿಸಿದ್ದು, ಸಂಧ್ಯಾ ಸುರಕ್ಷಾ ವೇತನ, ವೃದ್ದಾಪ್ಯ ವೇತನ, ಮತ್ತು ವಿಧವಾ ವೇತನವನ್ನು ದಾಖಲೆಗಳನ್ನು ಪರಿಶೀಲಿಸಿ, ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರ ವರದಿಯ ಆಧಾರದ ಮೇಲೆ ಮಂಜೂರು ಮಾಡಲಾಗಿದೆ. ಅಂಗವಿಕಲ ವೇತನವನ್ನು ತಮ್ಮ ಅವಧಿಯಲ್ಲಿ ಮಂಜೂರು ಮಾಡಿಲ್ಲವೆಂದು ಹೇಳಿದ್ದಾರೆ.

10. ಏಳು (7), 10 ರಿಂದ 13ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳಲ್ಲಿ –

ಗಜೇಂದ್ರಗಢದಲ್ಲಿ ವಿಶೇಷ ತಹಶೀಲ್ದಾರಾಗಿ ಕರ್ತವ್ಯ ನಿರ್ವಹಿಸಿದ್ದು, ಸಂಧ್ಯಾ ಸುರಕ್ಷಾ ವೇತನ, ವೃದ್ದಾಪ್ಯ ವೇತನ, ಅಂಗವಿಕಲ ಮತ್ತು ವಿಧವಾ ವೇತನಗಳನ್ನು ಸರ್ಕಾರದ ಸುತ್ತೋಲೆಗಳಿಗನುಗುಣವಾಗಿ ಆಯ್ಕೆ ಮಾಡಿದ್ದು, ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಕೇವಲ ಮೇಜು ತಪಾಸಣೆ ಮಾತ್ರ ಮಾಡಲಾಗಿದೆ. ಯಾವುದೇ ವೇತನಕ್ಕಾಗಿ ಅರ್ಜಿ ಬಂದ ಸಂದರ್ಭದಲ್ಲಿ ಸರ್ಕಾರದ ನಿರ್ದೇಶನದಂತೆ ದಾಖಲೆಗಳನ್ನು ಪರಿಶೀಲಿಸಿ, ಮಂಜೂರಾತಿ ಅಧಿಕಾರಿಯ ಮುಂದೆ ಕಡತ ಮಂಡಿಸುವುದು ರಾಜಸ್ವ ನಿರೀಕ್ಷಕರ ಕರ್ತವ್ಯವಾಗಿದೆಯೆಂದು ಹೇಳಿದ್ದಾರೆ.

11. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸಂಧ್ಯಾ ಸುರಕ್ಷಾ ಯೋಜನೆಗೆ ಸಂಬಂಧಪಟ್ಟ ಸರ್ಕಾರದ ಸುತ್ತೋಲೆಯಲ್ಲಿ ಯಾವುದೇ ವ್ಯಕ್ತಿ 65 ವರ್ಷ ಮೇಲ್ಪಟ್ಟಿರಬೇಕು, ಕೃಷಿ ಕಾರ್ಮಿಕ, ಅತೀ ಸಣ್ಣ ರೈತರು, ಸಣ್ಣ ರೈತರು, ನೇಕಾರರು, ಮೀನುಗಾರರು ಹಾಗೂ ವಾರ್ಷಿಕ ಆದಾಯ ₹10,000/–ಕ್ಕಿಂತ ಹೆಚ್ಚಾಗಿರಬಾರದು, ಪಿಂಚಣಿ ಸೌಲಭ್ಯ ಪಡೆಯಬಾರದು, ಗಂಡು ಮಕ್ಕಳಿದ್ದರೂ ಸಹ ಫಲಾನುಭವಿಗಳನ್ನು ಪೋಷಿಸದಿದ್ದರೆ ಅರ್ಹರು, ಜನನ ಪ್ರಮಾಣ ಪತ್ರ,

N. Ananda

ವೈದ್ಯಕೀಯ ಪ್ರಮಾಣ ಪತ್ರ, ಗುರುತಿನ ಚೀಟಿ, ಆಯಿಯ ದೃಢೀಕರಣ ಪತ್ರ, ಉದ್ಯೋಗ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಸದರಿ ಯೋಜನೆಯಡಿ ಫಲಾನುಭವಿಗಳನ್ನು 2012ರಲ್ಲಿ ಇಬ್ಬರು ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಆ ಸಂದರ್ಭದಲ್ಲಿ ಎದುರುದಾರರು ಫಲಾನುಭವಿಗಳಿಗೆ ಜಮೀನು ಇರುವ ಬಗ್ಗೆ ಮತ್ತು ಉದ್ಯೋಗದ ಬಗ್ಗೆ ಮಾಹಿತಿ ಪಡೆಯದೇ ಆಯ್ಕೆ ಮಾಡಿ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿದೆ. ಅದೇ ರೀತಿ ವೃದ್ಧಾಪ್ಯ ವೇತನಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಸುತ್ತೋಲೆಯಲ್ಲಿ, ಫಲಾನುಭವಿ 65 ವರ್ಷ ಮೇಲ್ಪಟ್ಟಿರಬೇಕು, ಯಾವುದೇ ಫಲಾನುಭವಿಗಳಿಗೆ ಮಾರಣಾಂತಿಕ ರೋಗಗಳಿದ್ದರೆ ಅಂಥಹವರ ವಯೋಮಿತಿ 60 ವರ್ಷಕ್ಕಿಂತ ಕಡಿಮೆಯಿರಬಾರದು, ಕುರುಡರು ಅಥವಾ ಜೀವನಾಂಶಗಳಿಗೆ ಅಸಮರ್ಥರಿರುವವರು 45 ವರ್ಷಕ್ಕಿಂತ ಕಡಿಮೆಯಿರಬಾರದು, ಫಲಾನುಭವಿಗಳಿಗೆ ಯಾವುದೇ ಆದಾಯ ಇರಬಾರದು, ಗಂಡು ಮಕ್ಕಳಿದ್ದರೂ ಸಹ ಫಲಾನುಭವಿಗಳನ್ನು ಪೋಷಿಸದಿದ್ದರೆ ಅರ್ಹರಾಗಿದ್ದಾರೆ. ಸದರಿ ಸೌಲಭ್ಯ ಪಡೆಯುವ ಸಂದರ್ಭದಲ್ಲಿ ಫಲಾನುಭವಿ ಜನನ ಪ್ರಮಾಣ ಪತ್ರ, ವೈದ್ಯಕೀಯ ಪ್ರಮಾಣ ಪತ್ರ, ಗುರುತಿನ ಚೀಟಿ, ಆದಾಯ ದೃಢೀಕರಣ ಪತ್ರ, ಉದ್ಯೋಗ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಎದುರುದಾರರು ಸದರಿ ಯೋಜನೆ ಅಡಿ 2586 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಆ ಸಂದರ್ಭದಲ್ಲಿ ಪಡಿತರ ಚೀಟಿ, ಗುರುತಿನ ಚೀಟಿ, ವಯಸ್ಸಿನ ಪ್ರಮಾಣ ಪತ್ರ, ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರ ಶಿಫಾರಸ್ಸು ಪತ್ರಗಳಿಲ್ಲದೆ ಮಂಜೂರು ಮಾಡಿರುವುದು ಕಂಡು ಬಂದಿದೆ. ಅದೇ ರೀತಿ, ವಿಧವಾ ವೇತನಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಸುತ್ತೋಲೆಯಲ್ಲಿ, ಫಲಾನುಭವಿಗಳು 18 ವರ್ಷ ಮೇಲ್ಪಟ್ಟಿರಬೇಕು ಮತ್ತು ಸಂಕಷ್ಟ ಸ್ಥಿತಿಯಲ್ಲಿದ್ದ, ಹಣಕಾಸಿನ ನೆರವಿನ ಅವಶ್ಯಕತೆಯಿರುವ ವಿಧವೆಯರು. ಫಲಾನುಭವಿಗಳ ಪತಿ ಮರಣ ಹೊಂದಿದ ದಿನಾಂಕದಿಂದ ಹಿಂದಿನ ನಿರಂತರ 3 ವರ್ಷಗಳ ಅವಧಿಗೆ ಕಡಿಮೆಯಿಲ್ಲದಂತೆ ಈ ರಾಜ್ಯದ ನಿವಾಸಿಯಾಗಿರಬೇಕು. ಸದರಿ ಫಲಾನುಭವಿಗಳು ಅಂಗವಿಕಲರು ಹಾಗೂ ಇತರೆ ಯೋಜನೆಯ ಫಲಾನುಭವಿಯಾಗಿರತಕ್ಕದ್ದು, ಸದರಿ ಫಲಾನುಭವಿಗಳಿಗೆ ಇತರೆಯವರ ಆಸರೆ ಇರಬಾರದು. ಸದರಿ ಫಲಾನುಭವಿಯು ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿರುವವರು ಅರ್ಹರಿರುವುದಾಗಿ ನಮೂದಾಗಿದ್ದು, ಎದುರುದಾರರು ಸುಮಾರು 227 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಆ ಸಂದರ್ಭದಲ್ಲಿ ಪಡಿತರ ಚೀಟಿ, ಗುರುತಿನ ಚೀಟಿ, ವಯಸ್ಸಿನ ಪ್ರಮಾಣ ಪತ್ರ, ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರ ಶಿಫಾರಸ್ಸು ಪತ್ರಗಳಿಲ್ಲದೆ ಮಂಜೂರು ಮಾಡಿರುವುದು ಕಂಡು ಬಂದಿದೆ. ಅದೇ ರೀತಿ, ಅಂಗವಿಕಲ ಯೋಜನೆಗೆ ಸಂಬಂಧಪಟ್ಟಂತೆ ಸರ್ಕಾರದ ಸುತ್ತೋಲೆಯಲ್ಲಿ ಆ ಫಲಾನುಭವಿಗಳು ಅಂಧತ್ವ, ಮಂದ ದೃಷ್ಟಿ, ಕುಷ್ಠ ರೋಗ, ಶ್ರವಣ ದೋಷವುಳ್ಳವರು, ಚಲನವಲನ ಧೋಷವುಳ್ಳವರು, ಹುಟ್ಟಿನಿಂದ ಅಥವಾ ಅಪಘಾತದಿಂದ ಅಂಗವಿಕಲರಾದವರು, ಬುದ್ಧಿಮಾಂಧ್ಯತೆ ಶೇ.40%ಕ್ಕಿಂತ ಕಡಿಮೆ ಇರುವವರು, ಇತರೆ ಯೋಜನೆ ಅಡಿ ಮಾಸಾಶನ ಪಡೆಯದಿರುವ ವ್ಯಕ್ತಿಗಳಾಗಿರಬೇಕೆಂದು ತಿಳಿಸಿದ್ದು, ಸದರಿ ಫಲಾನುಭವಿಗಳು ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕೆಂದು ನಮೂದಿಸಲಾಗಿದೆ. ಎದುರುದಾರರು ಒಟ್ಟು 227 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಆ ಸಂದರ್ಭದಲ್ಲಿ ಪಡಿತರ ಚೀಟಿ, ಗುರುತಿನ ಚೀಟಿ, ವಯಸ್ಸಿನ

N. Anand

ಪ್ರಮಾಣ ಪತ್ರ, ವೈದ್ಯಕೀಯ ಪ್ರಮಾಣ ಪತ್ರ, ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರ ಶಿಫಾರಸ್ಸು ಪತ್ರಗಳಿಲ್ಲದೆ ಮಂಜೂರು ಮಾಡಿರುವುದು ಕಂಡು ಬಂದಿದೆ. ಅಲ್ಲದೇ, ಸದರಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರು ನೀಡಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಪರಿಶೀಲಿಸಿ, ಈ ಬಗ್ಗೆ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾಸ್ಪತ್ರೆ, ಗದಗ ರವರ ವರದಿಯಲ್ಲಿ, ಒಟ್ಟು 170 ಫಲಾನುಭವಿಗಳ ವೈದ್ಯಕೀಯ ಪ್ರಮಾಣ ಪತ್ರದ ಪ್ರತಿಗಳಲ್ಲಿ 81 ಪ್ರಮಾಣ ಪತ್ರಗಳು ಜಿಲ್ಲಾಸ್ಪತ್ರೆ, ಗದಗ ದಿಂದಲೇ ನೀಡಿದ್ದು, ಇನ್ನುಳಿದ 87 ಫಲಾನುಭವಿಗಳ ಪ್ರಮಾಣ ಪತ್ರಗಳು ಜಿಲ್ಲಾಸ್ಪತ್ರೆ, ಗದಗದಲ್ಲಿ ಲಭ್ಯವಿಲ್ಲದೆ ಸೃಷ್ಟಿಸಿಕೊಂಡು, ಮಾಸಾಶನ ಪಡೆದಿರುವುದು ಕಂಡು ಬಂದಿದೆ. ಎದುರುದಾರರು ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ಅಂಗವಿಕಲ ವೇತನ ಮತ್ತು ವೃದ್ಧಾಪ್ಯ ವೇತನಕ್ಕೆ ಸಂಬಂಧಪಟ್ಟ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸರ್ಕಾರದ ಸುತ್ತೋಲೆಯಲ್ಲಿ ಹೇಳಲಾದ ಷರತ್ತುಗಳನ್ನು ಸರಿಯಾದ ರೀತಿ ಪಾಲಿಸದೇ ದಾಖಲೆಗಳನ್ನು ಸೃಷ್ಟಿಸಿ, ಫಲಾನುಭವಿಗಳನ್ನು ಆಯ್ಕೆ ಮಾಡಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾಧಿಕಾರಿಗಳ ವರದಿ ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಎರಡು (2) ಮತ್ತು 6ನೇ ಎದುರುದಾರರು ಕ್ರಮವಾಗಿ, ಶ್ರೀ.ಜಿ.ವಿ.ಶೇಷಗಿರಿ ಮತ್ತು ಶ್ರೀ.ವೈ.ಎಂ.ದುಂಡಿಗೇರಿ ರವರು ನಿವೃತ್ತಿ ಹೊಂದಿ 4 ವರ್ಷಗಳು ಮೇಲ್ಪಟ್ಟಿರುವುದರಿಂದ, ಸದರಿ 2 ಮತ್ತು 6ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

14. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1, 3 ರಿಂದ 5, ಮತ್ತು 7 ರಿಂದ 14ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

N. Ananda

15. ಅದಲ್ಲದೆ 1, 3 ರಿಂದ 5, ಮತ್ತು 7 ರಿಂದ 14ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ಮತ್ತು 9ನೇ ಎದುರುದಾರರು ಕ್ರಮವಾಗಿ, ದಿನಾಂಕ:31/08/2014 ಹಾಗೂ 30/06/2017ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ ಅಡಿ** ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಮತ್ತು ಸದರಿಯವರೆಲ್ಲರ ಅಂದರೆ 1, 3 ರಿಂದ 5, ಮತ್ತು 7 ರಿಂದ 14ನೇ ಎದುರುದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

16. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1 ಮತ್ತು 9ನೇ ಎದುರುದಾರರು ದಿ:31/08/2014 ಹಾಗೂ 30/06/17ರಂದು ಕ್ರಮವಾಗಿ, ನಿವೃತ್ತಿ ಹೊಂದಿರುತ್ತಾರೆ.

N. Anand 10/7

**(ನ್ಯಾಯಾಮೂರ್ತಿ ಎನ್ ಆನಂದ)**
**ಉಪಲೋಕಾಯುಕ್ತರು–1,**
**ಕರ್ನಾಟಕ ರಾಜ್ಯ.**